**ಅ.ದಾ. ಸಂ. 254/2017 PW-1**

**<u>ದಿನಾಂಕಃ 04.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

<u>ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ. ಎನ್.ಜಿ. ವಕೀಲರಿಂದಃ-</u>

1) ಸರ್ವೆ ನಂ.309/7 ರಲ್ಲಿ ಒಟ್ಟು 10 ಗುಂಟೆ ಇತ್ತು. ಸದರಿ ಸರ್ವೆ ನಂ.309 ನಂತರ 309/1 ಆಗಿ ಪ್ರಸ್ತುತ 309/7 ಆಗಿದೆ ಎಂದರೆ ಸರಿ. ಸದರಿ ಸರ್ವೆ ನಂ.309/7 ರ 10 ಗುಂಟೆ ಜಮೀನಿನ ಚಕ್ಕುಬಂದಿ ಪೂರ್ವಕ್ಕೆ ತಿಮ್ಮಮ್ಮನ ಜಮೀನು, ಪಶ್ಚಿಮಕ್ಕೆ ಮೇಷ್ಟ್ರು ಜಯರಾಮು ರವರ ಜಮೀನು. ಉತ್ತರಕ್ಕೆ ನಮ್ಮ ಅಕ್ಕ ಬೇಬಿ ರವರ ಜಮೀನು ಮತ್ತು ದಕ್ಷಿಣಕ್ಕೆ ಕೃಷ್ಣಪ್ಪ ರವರ ಜಮೀನು. ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ ಅದು ಸರ್ವೆ ನಂ.309/7 ರಪಹಣಿಯಾಗಿದ್ದು ಸದರಿ ದಾಖಲಾತಿಯನ್ನು ನಾನು ಈ ಹಿಂದೆ ನೋಡಿಲ್ಲ ಆದರೆ ಸದರಿ ದಾಖಲಾತಿಯು ಸರ್ವೆ ನಂ.309/7 ರ ಪಹಣಿ ಎಂದು ಒಪ್ಪಿಕೊಂಡ ಮೇರೆಗೆ ನಿಡಿ.2 ಎಂದು ಗುರುತಿಸಲಾಯಿತು. ಸದರಿ ಸ್ವತ್ತು ನಮ್ಮ ತಾಯಿ ರವರಿಗೆ ಬೋಗ್ಯ ಮಾಡಲಾಗಿತ್ತು ಎಂದರೆ ಸರಿ. ಆದ ಕಾರಣ ಈಗಲೂ ಸಹ ಸದರಿ ಸ್ವತ್ತು ನಿಮ್ಮ ತಾಯಿಯ ಸ್ವಾಧೀನಾನುಭವದಲ್ಲಿ ಇದೆ ಎಂದರೆ ಸರಿಯಲ್ಲ. ಅಸಲು ಬೋಗ್ಯ ಪತ್ರ ಸಹಾ ನಿಮ್ಮ ತಾಯಿ ಬಳಿ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವೆರದು ನಾನು ಕೇಳಿ ತಿಳಿದುಕೊಂಡಿದ್ದೇನೆ ಎಂದು ನುಡಿಯುತ್ತಾರೆ. ಈಗಲೂ ಸಹ ಸದರಿ ಅಸಲು ಬೋಗ್ಯ ಪತ್ರ ನಮ್ಮ ತಾಯಿ ಬಳಿ ಇದೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬೇಕಾಗುತ್ತದೆ ಎಂದು ಅದು ನಮ್ಮ ತಾಯಿ ಬಳಿ ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2) 2015 ರಲ್ಲಿ ಸರ್ವೆ ನಂ.309/7 ರ ಸ್ವತ್ತಿನ ಪ್ರತಿ ಗುಂಟೆಗೆ ಎಷ್ಟು ಬೆಲೆ ಇತ್ತು ಎಂದು ನನಗೆ ಗೊತ್ತಿಲ್ಲ ಆದರೆ ಎಕರೆಗೆ 6 ಲಕ್ಷ ಬೆಲೆ ಇತ್ತು ಎಂದು ನುಡಿಯುತ್ತಾರೆ. ಆ ಸಂದರ್ಭದಲ್ಲಿ ಪ್ರತಿ ಗುಂಟೆ 50 ಸಾವಿರ ರೂ ಬೆಲೆ ಇತ್ತು ಎಂದರೆ ಸರಿಯಲ್ಲ. ಅಂದಾಜು ಪ್ರತಿ ಗುಂಟೆಗೆ ಎಷ್ಟು ಬೆಲೆ ಇತ್ತು ಎಂದು ಹೇಳಲುಸಾಧ್ಯವಿಲ್ಲ ಆ ಸಮಯದಲ್ಲಿ ಯಾವುದೇ ಜಮೀನು ಮಾರಾಟವಾಗಿಲ್ಲ ಎಂದು ನುಡಿಯ್ಯುತ್ತಾರೆ. ಸದರಿ ಬೋಗ್ಯಕ್ಕೆ ನೀಡಿದ ಸ್ವತ್ತನ್ನೇ ನಿಪಿ.1 ರಂತೆ ನಮಗೆ ಮಾರಾಟ ಮಾಡುವುದಾಗಿ ಹೇಳಿ ಕರಾರು ಪತ್ರ ಬರೆದುಕೊಟ್ಟಿದ್ದು

ಎಂದರೆ ಸರಿಯಲ್ಲ. ನಿಪಿ.1 ಕರಾರು ಪತ್ರ ಮಾಡಿದ ಸಂದರ್ಭದಲ್ಲಿ ಪ್ರತಿ ಗುಂಟೆ 50 ಸಾವಿರ ಬೆಲೆ ಇದ್ದು 9 ಗುಂಟೆಗೆ 4 ಲಕ್ಷ 50 ಸಾವಿರ ಬೆಲೆ ನಿಗದಿಯಾಗಿ ಆ ಪೈಕಿ ನಾನು 2 ಲಕ್ಷ ರೂಗಳನ್ನು ಮುಂಗಡವಾಗಿ ನೀವು ಪ್ರತಿವಾದಿಗೆ ನೀಡಲಾಯಿತು ಎಂದರೆ ಸಾಕ್ಷಿ ಒಟ್ಟು ವ್ಯಾಪಾರವಾಗಿದ್ದು 19 ಕಾಲು ಗುಂಟೆಗೆ ಒಟ್ಟು 2 ಲಕ್ಷದ 10 ಸಾವಿರ ರೂಗಳು ಬೆಲೆ ನಿಗದಿಪಡಿಸಿದ್ದು ಆ ಹಣದ ಪೈಕಿ 2 ಲಕ್ಷ ಹಣವನ್ನು 1 ನೇ ಪ್ರತಿವಾದಿಗೆ ನೀಡಿದ್ದು ಉಳಿಕೆ 10 ಸಾವಿರ ಬಾಕಿ ಇದೆ ಎಂದು ನುಡಿಯುತ್ತಾರೆ. ಮಾರಾಟ ಮಾಡಲು ವ್ಯಾಪಾರವಾಗಿದ್ದು 9 ಗುಂಟೆ ಅದರ ಬೆಲೆ 4 ಲಕ್ಷ 50 ಸಾವಿರ ರೂಗಳಾಗಿದ್ದು ಆ ಪೈಕಿ 2 ಲಕ್ಷ ಮುಂಗಡ ಹಣ ನೀಡಿದ್ದು ಉಳಿಕೆ 2.5 ಲಕ್ಷ ನಿಮ್ಮ ತಾಯಿ ರವರೇ ಉಳಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ.

3) ದಾವಾ ಸ್ವತ್ತು 2015 ರಲ್ಲಿ ಪ್ರತಿ ಗುಂಟೆಗೆ 50 ಸಾವಿರಕ್ಕೂ ಹೆಚ್ಚು ಬೆಲೆ ಬಾಳುತ್ತಿತ್ತು ಎಂದರೆ ಸರಿಯಲ್ಲ. ಪ್ರಸ್ತುತ ಪ್ರತಿ ಗುಂಟೆಗೆ 3 ಲಕ್ಷಕ್ಕೂ ಅಧಿಕವಾಗಿ ಬೆಲೆ ಬಾಳುತ್ತದೆ ಎಂದರೆ ಸರಿ. ನಿಪಿ.1 ರ ಸಂಪೂರ್ಣ ಒಕ್ಕಣೆಯನ್ನು ನಮ್ಮ ತಾಯಿಯವರೇ ಹೇಳಿ ಬೆರಳಚ್ಚು ಮಾಡಿಸಿದ್ದು ಎಂದರೆ ಸರಿಯಲ್ಲ. ಪ್ರತಿವಾದಿಗಳು ನಮ್ಮ ತಾಯಿಯ ಮೇಲೆ ಇರುವ ವಿಶ್ವಾಸದಿಂದ ಓದದೇ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಪಿ.1 ರ ದಾಖಲಾತಿಗೆ ನಾನು ಸಹಿ ಮಾಡಿಲ್ಲ. ಸರ್ವೆ ನಂ.309/7 ರಲ್ಲಿ 9 ಗುಂಟೆ ಜಮೀನನ್ನು ಪ್ರತಿವಾದಿಯವರು ನಿಮ್ಮ ತಾಯಿಗೆ ಬೋಗ್ಯಕ್ಕೆ ನೀಡಿದ್ದ ನಿಮ್ಮ ತಾಯಿ ರವರೇ ಸ್ವಾಧೀನದಲ್ಲಿದ್ದ ಕಾರಣ ಅವರು ಯಾವುದೇ ಕಾನೂನು ಕ್ರಮ ಜರುಗಿಸಿರಲಿಲ್ಲ ಎಂದರೆ ಸರಿಯಲ್ಲ. ನಮ್ಮಗಳ ಚಿತಾವಣೆ ಮೇರೆಗೆ ನಮ್ಮ ತಾಯಿ ಪ್ರಸ್ತುತ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ.

4) ಸರ್ವೆ ನಂ.309/7 ರ 9 ಗುಂಟೆ ಸ್ವತ್ತಿಗೆ ಸಂಬಂಧಿಸಿದಂತೆ ಈಗಾಗಲೇ4.5 ಲಕ್ಷ ಹಣದ ಪೈಕಿ 2 ಲಕ್ಷ ನಿಮ್ಮ ತಾಯಿ ನೀಡಿದ್ದು ಉಳಿಕೆ 2.5 ಲಕ್ಷ ನಿಮ್ಮ ತಾಯಿ ನೀಡಿದರೆ ಸದರಿಯವರು ಸರ್ವೆ ನಂ.309/7 ರ 9 ಗುಂಟೆಗೆ ಕ್ರಯ ಪತ್ರ ಬರೆದುಕೊಡಲು ಸಿದ್ಧರಿದ್ದಾರೆ ಎಂದರೆ ಸಾಕ್ಷಿ ನಾವು ಸರ್ವೆ ನಂ.309/7 ಅನ್ನು ಖರೀದಿ ಮಾಡಲು ಇಚ್ಚೆಸಲಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಸರ್ವೆ ನಂ.183/2 ರಲ್ಲಿ 19 ಕಾಲು ಗುಂಟೆ ಜಮೀನನ್ನು ಮಾರಾಟ ಮಾಡುವ ಉದ್ದೇಶದಿಂದ ಕ್ರಯದ ಕರಾರು ಪತ್ರ ಬರೆದುಕೊಟ್ಟಿಲ್ಲ

ಬದಲಿಗೆ ಸರ್ವೆ ನಂ.309/7 ರಲ್ಲಿ 9 ಗುಂಟೆ ಮಾತ್ರ ಮಾರಾಟ ಮಾಡಲು ಒಪ್ಪಿದ್ದರು ಎಂದರೆ ಸರಿಯಲ್ಲ. ಸರ್ವೆ ನಂ.309/7 ರಲ್ಲಿ 9 ಗುಂಟೆ ಬದಲಿಗೆ ಸರ್ವೆ ನಂ.183/2 ರಲ್ಲಿ 19 ಕಾಲು ಗುಂಟೆ ಎಂದು ತಪ್ಪಾಗಿ ನಮೂದಿಸಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.1 ಅನ್ನು ನಾನು ಹಾಗೂ ನಮ್ಮತಾಯಿಯೇ ಸೇರಿಕೊಂಡು ಬರೆಸಿರುವುದು ಎಂದರೆ ಸರಿಯಲ್ಲ. ನಿಪಿ.1 ಕ್ಕೆ ನೀವೂ ಕೂಡಾ ಸಾಕ್ಷಿದಾರರಾಗಿ ಸಹಿ ಮಾಡಿದ್ದೀರಾ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ